# ಅಸ್ತಿತ್ವ ಮತ್ತು ದೇವರು

ನಾವು ಮೂಲ ಅಸ್ತಿತ್ವವನ್ನು ಅರಸುತ್ತ ಹೋದಷ್ಟೂ ಅದು ನಮ್ಮ ಗ್ರಹಿಕೆಯಿಂದ ದೂರ ವಾಗುತ್ತಾ ಹೋಗುತ್ತದೆ. ಆದರೂ ಮಾನವನು ಅದನ್ನು ಗ್ರಹಿಸುವ ಪ್ರಯತ್ನವನ್ನು ಬಿಡಲಾರ. ಡಾ. ರಾಮಚಂದ್ರ ಸ್ವಾಮಿಯವರ ಈ ಲೇಖನದಲ್ಲಿ ಈ ಪ್ರಯತ್ನದ ಒಂದು ಮುಖವನ್ನು ಕಾಣಬಹುದು. ಪರಿಸರದ ಮೇಲೆ ವಿಶೇಷ ಸಂಶೋಧನೆಗಳನ್ನು ನಡೆಸಿರುವ ಲೇಖಕರು ಬ್ರಿಟಿಷ್ ಈಕಾಲಾಜಿಕಲ್ ಸೊಸೈಟಿಯ ಸದಸ್ಯ ರಾಗಿರುವರು.

ಡಾ. ಹೆಚ್. ರಾಮಚಂದ್ರ ಸ್ವಾಮಿ

## ವಸ್ತು ಮತ್ತು ವಸ್ತುತ್ವ

ಪಾಶ್ಚಿಮಾತ್ಯ ದೇವತಾಶಾಸ್ತ್ರ ಹಾಗೂ ಭೌತಾತೀತ ಅಧ್ಯಾತ್ಮ ಶಾಸ್ತ್ರಗಳಲ್ಲಿ, ದೃಗ್ಗೋಚರ ವಸ್ತುಗಳಿಗಿಂತ ಅವುಗಳ ವಸ್ತುತ್ವಕ್ಕೆ ಹೆಚ್ಚು ಪ್ರಾಮುಖ್ಯ ನೀಡುವುದು ವಾಡಿಕೆ. ವಸ್ತುಗಳು ಆನುಷಂಗಿಕವಾಗಿ ಬರುತ್ತವೆ, ಹೋಗುತ್ತವೆ; ಆದರೆ ವಸ್ತುತ್ವ ಹೆಚ್ಚು ಚಿರಸ್ಥಾಯಿಯಾಗಿ ಉಳಿದುಕೊಳ್ಳುತ್ತದೆ ಎಂಬ ಭಾವ. ಗೋವಿಗಿಂತ ಗೋತ್ವ ಮುಖ್ಯ ವಾದುದು. ಉದಾಹರಣೆಗೆ ವಿ.ಸೀ.ಯವರ 'ದೋಸೆ'ಎಂಬ ಲಲಿತ ಪ್ರಬಂಧವನ್ನು ಓದಿದಾಗ ನಮಗಾಗುವ ಅನುಭವ ದೋಸೆಯ ದೋಸೆತನವೇ ಹೊರತು ದೋಸೆಯೇ ಅಲ್ಲ; ಕೆ. ಎಸ್. ನರಸಿಂಹ ಸ್ವಾಮಿಯವರ 'ನಿನ್ನ ಹೆಸರು'ಎಂಬ ಕವನವನ್ನು ಓದಿದಾಗ ಅನುಭವ ವಾಗುವುದು ನಾವಿಷ್ಟಪಡಬಹುದಾದ ಪ್ರೇಮಭಾವವೇ ಹೊರತು ಪ್ರೇಮವೇ ಅಲ್ಲ(ಅಂತಹ ಪ್ರೇಮ ನಮಗೆ ಲಭಿಸಿದೆಯೇ ಇಲ್ಲವೆ, ಸಂಭವನೀಯವೆ ಅಲ್ಲವೆ, ನಿಜ ಜೀವನದಲ್ಲಿ ನಾವು ಅಂತಹ ಅನುಭವವೊಂದಕ್ಕೆ ಪಾತ್ರರಾಗಲು ಯೋಗ್ಯರೆ–ಇದಾವುದೂ ಅಲ್ಲಿ ಸಂಗತವಾಗುವುದಿಲ್ಲ). ಇತ್ತೀಚಿನ ಬುದ್ಧಿಪ್ರಧಾನ ಭೌತಾತೀತ ವಾದದಲ್ಲಿ ದೇವರ ಅಸ್ತಿತ್ವವನ್ನು ಸ್ಥಾಪಿಸಹೊರಡುವ ಎಲ್ಲ ಪ್ರಯತ್ನಗಳೂ ಆನುಷಂಗಿಕತೆಯಿಂದಲೇ ಮೊದಲಾಗುವುದನ್ನು ಕಾಣಬಹುದು. ಪ್ರಪಂಚವು ಆನುಷಂಗಿಕ ಎಂಬ ವಿಷಯದಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಏಕೆಂದರೆ ನಾವು ಕಾಣುವ ಪ್ರಪಂಚದ ಆಗುಹೋಗುಗಳ ಆನುಷಂಗಿಕತೆ ಸ್ವಾಭಾವಿಕ ಎಂಬುದು ನಮ್ಮ ಅನುಭವಕ್ಕೇ ಬರುತ್ತದೆ. ಯಾವುದೇ ಆನುಷಂಗಿಕ ಘಟನೆಗೆ ಕಾರಣವೊಂದು ಅದರ ಹೊರಗೆ ಇದ್ದಿರಲೇಬೇಕು, ಕಾರ್ಯವು ಕಾರಣ ವಿಲ್ಲದೆ ಇರಲಾರದು ಇತ್ಯಾದಿ ವಾದಗಳು ಕೊನೆಮೊದಲಿಲ್ಲದಂತೆ ನಡೆದರೂ–ಪ್ರಪಂಚವು ಅಚಿಂತ್ಯ ಕಾರಣವುಳ್ಳ ಪ್ರಮಾದಗಳ ಸಂತೆ ಯಾಗಿಯೇ ಮುಂದುವರೆದಿದೆ.

## ವಸ್ತುಗಳ ಹಿಂದಿರುವ ಸತ್ಯ ಯಾವುದು?

ಭೌತಾತೀತವಾದದ ಉದ್ದೇಶ–ವಸ್ತುಗಳ ಅಸ್ತಿತ್ವದ ಹಿನ್ನಲೆ ಯಲ್ಲಿರುವ ವಾಸ್ತವ ಏನೆಂದು ಪರಾಮರ್ಶಿಸುವುದು, ಮತ್ತು ಅಂಥ ವಾಸ್ತವ ಬೌದ್ಧಿಕವಾಗಿ ನಮಗೆ ದಕ್ಕುವಂಥಾದ್ದೇ ಎಂಬು ದನ್ನು ಪರೀಕ್ಷಿಸುವುದು. ಸರಿ. ಆದರೆ ಸಾಂಪ್ರದಾಯಿಕ ಭೌತಾತೀತವಾದಿಗಳು ಇದನ್ನು ಮಾಡಿಕೊಂಡು ಬಂದಿದ್ದಾರೆಯೇ ಎಂಬುದು ಪ್ರಶ್ನೆ. ದೋಸೆತನವೇ ದೋಸೆಯೆಂದುಕೊಂಡು ಬಂದಿರುವುದನ್ನು ನಾವು ಉದ್ದಕ್ಕೂ ಕಾಣುತ್ತೇವೆ. ಪ್ಲೇಟೋನಿಕ್ 'ಐಡಿಯಾ'ಗಳನ್ನೇ ವಸ್ತುಗಳೆಂದು ಭ್ರಮಿಸಿಕೊಂಡು ಅವುಗಳಿಗೆ ವಾಸ್ತವಿಕತೆಯನ್ನು ತಪ್ಪಾಗಿ ಪ್ರದಾನ ಮಾಡಲಾಗಿದೆ. ಡೇಕಾರ್ಟ್ (Descartes)ನಂತೂ ವಿಶಿಷ್ಟವಾದ ಹಾಗೂ ಅನುಮಾನಿಸ ಲಾಗದಂಥ 'ಐಡಿಯಾ'ಗಳೇ ವಾಸ್ತವಿಕತೆಯ ತಳಹದಿ ಎನ್ನು ತ್ತಾನೆ. (*idee claire et distincte*).

ಭಾವಸತ್ತಾವಾದಿ ಕ್ಯಾಂಟನು (Kant) ಈ ಕಾಲ್ಪನಿಕ ಅಥವಾ ಪ್ಲೇಟೋನಿಕ್ ಭೌತಾತೀತವಾದವನ್ನು ನಿರಾಕರಿಸಿದ್ದು ಸರಿಯಾಗಿದೆ. ಆದರೆ ಕ್ಯಾಂಟ್ ಇನ್ನೊಂದು ಬಗೆಯಲ್ಲಿ ಭೌತಾತೀತವಾದದ ಉದ್ದೇಶಕ್ಕೆ ಧಕ್ಕೆ ತರುತ್ತಾನೆ. ಭೌತಾತೀತವಾದದ ಉದ್ದೇಶ ಸಾಧನೆಗೆ ಅಗತ್ಯವಾದವು ಎರಡು: (1)ನಾವು ವಾಸ್ತವವನ್ನು (ಸ್ವಲ್ಪ ವಾದರೂ)ತಿಳಿದುಕೊಳ್ಳಬಲ್ಲೆವು ಹಾಗೂ (2)ಹೀಗೆ ತಿಳಿದುಕೊಂಡ ವಾಸ್ತವಜ್ಞಾನದ ಅಲ್ಪಾಂಶವೇ ನಮ್ಮನ್ನು ವಾಸ್ತವಿಕತೆಯ ಸಮ್ಯಕ್ ಸ್ವರೂಪದರ್ಶನದೆಡೆಗೆ ಕರೆದೊಯ್ಯುವುದು. ಈ ಎರಡೂ 'ನಂಬಿಕೆ'ಗಳಾಗಬೇಕೆಂದಿಲ್ಲ; ಅಗತ್ಯವಾದ ಉಪಕರಣರೂಪದ ನೆಚ್ಚಿಕೆಗಳಾಗಬಹುದು. ಈ ನೆಚ್ಚಿಕೆಗಳಲ್ಲಿ ಮೊದಲನೆಯದನ್ನು ಕ್ಯಾಂಟ್ ಮಾನ್ಯ ಮಾಡುವುದಿಲ್ಲ. ಅದು ಅಸಾಧ್ಯ, ಯುಟೋ–ಪಿಯನ್ ಎನ್ನುತ್ತಾನೆ. ಕ್ಯಾಂಟ್ ನಂತರದಲ್ಲಿಯೂ ತತ್ತ್ವ ವಾದಿಗಳಲ್ಲಿ (ಇಂದ್ರಿಯಗೋಚರವಾದಿಗಳೂ ಸೇರಿದಂತೆ) ಈ ಬಗ್ಗೆ ಒಮ್ಮತ ಏರ್ಪಡದೆ, ಇಂದಿಗೂ ಭೌತಾತೀತವಾದದ ಉದ್ದೇಶಗಳು ಸಾಧನೀಯವೆನಿಸದೆ ಹಾಗೇ ಉಳಿದಿವೆ;

ಪ್ಲೇಟೋವಿನ ನೆರಳಿನಲ್ಲಿ ಭೌತಾತೀತವಾದವು ಅಸಾಧ್ಯವೆಂದೇ ಪರಿಗಣಿಸಲ್ಪಡುತ್ತಿದೆ.

ಒಂದು ವೇಳೆ ಈ ನೆಚ್ಚಿಕೆಗಳನ್ನೇ ಆಧರಿಸಿ ಮುಂದುವರೆಯೋಣವೆಂದರೆ, ಇನ್ನೊಂದು ಕಷ್ಟ ಎದುರಾಗುತ್ತದೆ. ವಸ್ತುಗಳ (ಅಥವಾ ಪ್ರಪಂಚದ) ಅಸ್ತಿತ್ವವನ್ನೇ ಪ್ರಶ್ನಿಸಿದಾಗ, ಯಾವುದರ ಸ್ಪಷ್ಟತೆಯೂ ಉಳಿಯುವುದಿಲ್ಲ; ಯಾವುದಾದರೊಂದನ್ನು ಇದು ವಾಸ್ತವ ಅಥವಾ ಮಿಥ್ಯೆ ಎಂದು ತೀರ್ಮಾನಿಸುವುದಕ್ಕೆ ತಳಹದಿಯೇ ಇರುವುದಿಲ್ಲ. ತತ್ತ್ವ, ಕಲ್ಪನೆ, ತೀರ್ಮಾನ–ಯಾವುದೊಂದೂ ಸ್ಪಷ್ಟತೆಯನ್ನಾಗಲಿ ವಿಶಿಷ್ಟತೆಯನ್ನಾಗಲಿ ಪಡೆದುಕೊಳ್ಳಲಾಗುವುದಿಲ್ಲ. ಡೇಕಾರ್ಟನ ಜತೆಯಲ್ಲಿ ನಾವೂ ಸಹ 'ನಾನಿದ್ದೇನೆ'ಎಂದು ಘೋಷಿಸುವುದು ಸಹ ಸಾಧ್ಯವಾಗುವುದಿಲ್ಲ. (ಏಕೆಂದರೆ 'ನಾನು ಯೋಚಿಸುವೆ; ಆದ್ದರಿಂದ ನಾನಿದ್ದೇನೆ' ಎನ್ನುವಾಗ 'ನಾನು ಯೋಚಿಸು'ವುದು ವಾಸ್ತವವೋ ಅಲ್ಲವೋ ತೀರ್ಮಾನವಾಗಿರುವುದಿಲ್ಲ.)

## ಅಮೂರ್ತ ಅಸ್ತಿತ್ವ

ಅಸ್ತಿತ್ವವಾದದ ಪ್ರವರ್ತಕನೆಂದು ಪ್ರಸಿದ್ಧನಾದ ಜೀನ್ ಪಾಲ್ ಸಾರ್ತ್ರ್‌ನ ಬರಹಗಳಲ್ಲಿ ವಾಸ್ತವತೆ ಮತ್ತು ಆನುಷಂಗಿಕತೆಗಳ ಬಗ್ಗೆ ಚಿಂತನವಿದೆ. 'ನಾಸಿಯಾ'ದಲ್ಲಿ ಕಥಾನಾಯಕ ರೊಕೆಂಟಿನ್ ತನ್ನನ್ನು ವಸ್ತುಗಳ ಸ್ವರೂಪ ಹೇಗೆ ತಟ್ಟಿತು ಎನ್ನುವುದನ್ನು ಡೈರಿ ಬರೆದಿಡುತ್ತಾನೆ:

'ತೀರ ಇತ್ತೀಚಿನವರೆಗೆ ಅಸ್ತಿತ್ವದ ಬಗ್ಗೆ ನನ್ನ ಮನಸ್ಸಿನಲ್ಲಿ ಸಮಸ್ಯೆಯಿರಲಿಲ್ಲ. ಸಮುದ್ರದ ಅಂಚಿನಲ್ಲಿ ಈಜುಡುಪು ಧರಿಸಿ ಆಟವಾಡುತ್ತ ನಡೆಯುವ ಸಾಮಾನ್ಯರೆಲ್ಲರಂತೆ ನಾನೂ "ಸಮುದ್ರ ಹಸಿರಾಗಿದೆ; ಅಲ್ಲಿ ಕಾಣುವ ಬಿಳಿ ಚುಕ್ಕೆಯೇ ಸಮುದ್ರದ ಹಕ್ಕಿ" ಇತ್ಯಾದಿ ಅಂದುಕೊಳ್ಳುತ್ತ ನಡೆಯುತ್ತಿದ್ದೆ. ಅವುಗಳಿಗಿರುವ ಅಸ್ತಿತ್ವ ನನ್ನನ್ನು ತಟ್ಟಿರಲಿಲ್ಲ. ಅಸ್ತಿತ್ವ ಅಲ್ಲಿ ಇಲ್ಲಿ ಎಲ್ಲೆಲ್ಲೂ ಇದೆ; ನಮ್ಮನ್ನಾವರಿಸಿ ನಮ್ಮೊಳಗೂ ಇದೆ; ನಾವೇ ಆಗಿದೆ; ಅದನ್ನುಳಿದು ನಮ್ಮ ನುಡಿಯಿಲ್ಲ, ನಡೆಯಿಲ್ಲ; ಆದರೂ ನಾವದನ್ನು ಮುಟ್ಟಲಾರೆವು, ಗ್ರಹಿಸಲಾರೆವು. ಅದರ ಯೋಚನೆ ಮಾಡುವಾಗ ನನ್ನ ತಲೆಯಲ್ಲಿ ಅದನ್ನುಳಿದು ಬೇರೆ ಏನೂ ಇರಲಿಲ್ಲ, ಇರಲಿಕ್ಕೆ ಸಾಧ್ಯವೂ ಇರಲಿಲ್ಲ. ಅದು ಒಂದೇ –ಅಸ್ತಿತ್ವದ ಸ್ವರೂಪ! '(La Nausee, Paris: Gallimard, Page 161)

ನಮ್ಮನ್ನು ನಾವು ತೆರೆದಿಟ್ಟುಕೊಂಡರೆ ಅಸ್ತಿತ್ವ ಓತಪ್ರೋತವಾಗಿ ತುಂಬಿಕೊಳ್ಳುತ್ತದೆ ಎಂಬುದು ಇಲ್ಲಿಯ ಭಾವ. ರೊಕೆಂಟಿನ್ ಈ ಭಾವದಿಂದ ಎಚ್ಚೆತ್ತಮೇಲೆ ಅವನಿಗೆ ಏನೆನ್ನಿಸುತ್ತದೆ? 'ಅಸ್ತಿತ್ವ ಅಸಂಗತ; ಅರ್ಥಹೀನ'. ಅಸ್ತಿತ್ವದ ಆ ಅನುಭವ ಅವನಿಗೆ ಬಂದದ್ದೇ 'ಆನುಷಂಗಿಕವಾಗಿ'. ರೊಕೆಂಟಿನ್ ಮುಂದುವರೆದು ಹೇಳುತ್ತಾನೆ– 'ಮುಖ್ಯವಾದ ಅಂಶವೆಂದರೆ ಆನುಷಂಗಿಕತೆಯೇ. ನನ್ನ ಅರ್ಥವೇನೆಂದರೆ ಅಸ್ತಿತ್ವ ಅವಶ್ಯಕತೆಯೇನಲ್ಲ.' ಎಂದರೆ ಇಲ್ಲಿ ವಾಸ್ತವವೆಂಬುದು ಬುದ್ಧಿಗಮ್ಯವಲ್ಲ. ನಾವು ಅದರಲ್ಲಿ ಕರಗಿಹೋಗಿಬಿಡಬಹುದು, ಕಳೆದುಹೋಗಿಬಿಡಬಹುದು; ಹಾಗಿದ್ದರೂ ಅದರ ಬಗ್ಗೆ ಏನನ್ನೂ ಹೇಳಲಾರೆವು. ಅಸ್ತಿತ್ವದ ಬಗ್ಗೆ ನಾವೇನೇ ಹೇಳಿದರೂ ಅದು ನಾವು ಅದರ ಮೇಲೆ ಆರೋಪಿಸುವ ನಮ್ಮ ಭಾವನೆಯೇ ಹೊರತು ಅದರ ವಿವರಣೆಯಾಗಲಾರದು. ಇದನ್ನು ಅರ್ಥದ ಆದರ್ಶವೆನ್ನೋಣವೆ, ಆದರ್ಶದ ಅರ್ಥವಂತಿಕೆಯೆನ್ನೋಣವೆ?

ಅಸ್ತಿತ್ವದ ಬಗ್ಗೆ ನಾವೇನೇ ಹೇಳಿದರೂ ಅದು ನಾವು ಅದರ ಮೇಲೆ ಆರೋಪಿಸುವ ನಮ್ಮ ಭಾವನೆಯೇ ಹೊರತು ಅದರ ವಿವರಣೆಯಾಗಲಾರದು. ಇದನ್ನು ಅರ್ಥದ ಆದರ್ಶವೆನ್ನೋಣವೆ, ಆದರ್ಶದ ಅರ್ಥವಂತಿಕೆಯೆನ್ನೋಣವೆ?

## ತಿಳಿಯಲಾಗದ ಅಸ್ತಿತ್ವದಿಂದ ಪ್ರಯೋಜನವೇನು?

ಇಲ್ಲಿರುವುದು ವಾಸ್ತವಿಕ ಸತ್ಯದ ಬಗ್ಗೆ ಪ್ರಶ್ನೆ ಹಾಗೂ ಅದನ್ನು ಉತ್ತರಿಸುವ ಪ್ರಯತ್ನ. ಆದರೆ ನಾವು ವಿಚಾರಿಸಿಕೊಂಡು ಹೊರಟಿರುವ ಅಸ್ತಿತ್ವ ನಮಗೆ ಯಾವ ಉತ್ತರವನ್ನೂ ಕೊಡಲಾರದು. ಅದನ್ನು 'ಅರ್ಥ'ಮಾಡಿಕೊಳ್ಳಲಾರೆವು. ಅರ್ಥರಹಿತವೋ ಅರ್ಥಸಹಿತವೋ ತಿಳಿಯದಾದರೂ ಅದು ಇದೆ, ಇತ್ತು, ಮುಂದೆಯೂ 'ಇರು'ತ್ತದೆ. ನಮ್ಮಲ್ಲಿ ಯಾವ 'ಹೊಳಹ'ನ್ನೂ ಉಂಟುಮಾಡಲಾರದ ಇದು ಇದ್ದರೇನು, ಇಲ್ಲದಿದ್ದರೇನು? ಆದ್ದರಿಂದ ಅಸ್ತಿತ್ವ 'ಅಸಂಗತ'ವಲ್ಲದೆ ಇನ್ನೇನು?–ಎಂಬ ಪ್ರಶ್ನೆಗಳು ಏಳುತ್ತವೆ.

ವಸ್ತುಗಳ ಶ್ರೀಮನ್ಮೂಕವಾದ, ಗಭೀರವಾದ ಅರ್ಥೈಸಲಾಗದ ಅಸ್ತಿತ್ವವು ನಮಗೆದುರಾದಾಗ ಭಯ, ಕಿಂಕರ್ತವ್ಯವಿಮೂಢತೆ, ಅರ್ಜುನನ ವಿಷಾದ ನಮ್ಮನ್ನು ತುಂಬಿಕೊಳ್ಳಬಹುದು. ನಮ್ಮಲ್ಲಿರುವ ಕುರುಡು ಕೊಂಕು ಡೊಂಕು, ವಿರೋಧಾಭಾಸಗಳ ಸಂತೆ, ಇಡೀ ವಿಶ್ವದ ಮೂಕ ಪ್ರೇಕ್ಷಕನಾಗಿರುವ ನಮ್ಮ ಸ್ಥಿತಿ ನಮಗರಿವಾಗಬಹುದು. ಕತ್ತಲೆಯ ಮೂಲೆಯಲ್ಲೆಲ್ಲೋ ನಮ್ಮನ್ನಿರಿಸಿರುವಂತೆ ಅನಿಸಬಹುದು. ಯಾರಿಟ್ಟರು ನಮ್ಮನ್ನಿಲ್ಲಿ? ಯಾವಾಗ, ಯಾಕೆ? ನಾವು ಸತ್ತಮೇಲೆ ಏನಾದೀತು? (ವಿಶ್ವಕ್ಕೆ? ನಮಗೆ?) ಎಂಬ ಪ್ರಶ್ನೆಗಳು ನಮ್ಮನ್ನು ಕಾಡಬಹುದು. ನಿದ್ದೆಯಲ್ಲಿ ನಮಗೆ ತಿಳಿಯದಂತೆ ನಮ್ಮನ್ನು ಗೊತ್ತುಗುರಿಯಿಲ್ಲದ, ಯಾರೂ ಇಲ್ಲದ, ಏನೂ ಇಲ್ಲದ ಮರಳುಗಾಡಿನ ಮಧ್ಯೆ ತೆಗೆದುಕೊಂಡು ಹೋಗಿ ಬಿಟ್ಟಂತೆ ಅಲ್ಲವೆ ಇದು? ಇಂಥ ಅನುಭವ ಅಸ್ತಿತ್ವದ ಪ್ರಥಮಪಾಠ ಮಾತ್ರವಾಗಿದ್ದು, ಮುಂದೆ ಹೆಚ್ಚಿನ ತಿಳಿವು ಮೂಡಬಹುದಾದ ಸಾಧ್ಯತೆಯಿಲ್ಲದೆ ಇದ್ದರೆ ಹಾಗೂ ಇದೇ ನಿಜವಾದ ಅಸ್ತಿತ್ವದ ಅನುಭವವಾದರೆ—ಆಗ ಭೌತಾತೀತವಾದವು ಕೇವಲ ಆನುಷಂಗಿಕತೆಯಲ್ಲಿಯೇ ಕೊನೆಗೊಳ್ಳಬಹುದು.

## ವಸ್ತುಗಳ ವ್ಯುತ್ಪತ್ತಿ

'ನಾಸಿಯಾ'ದಲ್ಲಿ ಇನ್ನೊಂದು ಕಡೆ ಸಾರ್ತ್ರ್ ಹೇಳುತ್ತಾನೆ: 'ಅಸ್ತಿತ್ವವೆಂದರೆ ಕೇವಲ "ಇರು"ವುದು ಅಷ್ಟೇ. ಅಸ್ತಿತ್ವವುಳ್ಳ ವಸ್ತುಗಳು ನಮಗೆ "ಸಿಕ್ಕು"ತ್ತವೆಯಾದರೂ ಅವುಗಳ ವ್ಯುತ್ಪತ್ತಿ ನಮಗೆ ಸಾಧ್ಯವಿಲ್ಲ, ಅವುಗಳನ್ನು "ಅರ್ಥ"ಮಾಡಿಕೊಳ್ಳುವುದೂ ನಮಗೆ ಸಾಧ್ಯವಿಲ್ಲ. ಈ ಅಸ್ತಿತ್ವದ ಆನುಷಂಗಿಕತೆ ವೇಷವಲ್ಲ, ಮುಖವಾಡವಲ್ಲ; ಅದು ಪರಮ ಹಾಗೂ ನಿರ್ನಿಮಿತ್ತವಾದದ್ದು.'

ಎಂದರೆ ಸ್ವಪ್ರಮಾಣನೂ ಸ್ವಕಾರಣನೂ ಆದ ದೇವರೊಬ್ಬನಿಂದ ಈ ವಸ್ತುಗಳಿಂದ ಕೂಡಿದ ಪ್ರಪಂಚವು ವ್ಯುತ್ಪತ್ತಿಯಾಗಿಲ್ಲ ಎಂದಾಯಿತು.

ಹಾಗೆ ವ್ಯುತ್ಪತ್ತಿಯಾಗಿರಬೇಕಾದ ಆವಶ್ಯಕತೆಯೂ ಇಲ್ಲ. ದೇವರ 'ಇರು'ವಿಕೆಯ ಬಗೆಗಿನ ನಮ್ಮ ಜ್ಞಾನ (ಅಥವಾ ಇಲ್ಲದಿರುವಿಕೆಯ ಬಗೆಗಿನ ಜ್ಞಾನ) ಕೇವಲ ನಮಗೆ ಸಾಪೇಕ್ಷವಾದದ್ದು. ಅಂತಹ ಸಾಪೇಕ್ಷವಾದ ದೇವರಿಂದ ನಮಗೆ ಸಾಪೇಕ್ಷವಲ್ಲದ ವಸ್ತುಗಳ ಅಸ್ತಿತ್ವ ವ್ಯುತ್ಪತ್ತಿಯಾಗುವುದು ಸಾಧ್ಯವೂ ಅಲ್ಲ. ಆದರೆ ವಸ್ತುಗಳ ಅಸ್ತಿತ್ವಕ್ಕೆ ಬಾಧಕವಿಲ್ಲದಂತೆ ಸರ್ವಾಂತರ್ಯಾಮಿ, ಓತಪ್ರೋತ, ಅತೀತ ಇತ್ಯಾದಿಯಾದ ನಿರ್ವಿಶೇಷ ದೇವರು ಇರಬಹುದು ತಾನೆ? ಹೆಗೆಲ್ ಮೊದಲಾದ ತಾತ್ತ್ವಿಕರು ದೇವರ ಇರುವಿಕೆ ಇಲ್ಲದಿರುವಿಕೆಗಳನ್ನು ವಿಮರ್ಶೆ ಪರಾಮರ್ಶೆ ಎಲ್ಲಾ ಮಾಡಿದನಂತರ ಕೊನೆಯದಾಗಿ ಥಾಮಸ್ ಆಕ್ವಿನೋ ಹೇಳುವಂತೆ, ದೇವರ ಬಗ್ಗೆ 'ನಮಗೆ ಗೊತ್ತಿಲ್ಲ' ಎಂಬ ತೀರ್ಮಾನಕ್ಕೆ ಬರುತ್ತಾರೆ.

> ವಿಶಿಷ್ಟವಾದುದನ್ನು ಸಾಮಾನ್ಯವಾದುದಕ್ಕೆ ಹೋಲಿಸಬೇಕು; ಸಾಮಾನ್ಯವಾದುದನ್ನು ಅದಕ್ಕಿಂತ ಮತ್ತೂ ಸಾಮಾನ್ಯವಾದುದಕ್ಕೆ ಹೋಲಿಸಬೇಕು. ನಮ್ಮಲ್ಲಿರುವ ಕೊನೆಯ ಭಾವನೆಯೇ (concept), ಸರ್ವವ್ಯಾಪಿಯಾದದ್ದೇ ಅಸ್ತಿತ್ವ. ಅಸ್ತಿತ್ವವೇ ಸರ್ವಸಾಮಾನ್ಯವಾದುದರಲ್ಲಿ ಚರಮ ಭಾವನೆ...... ಎಲ್ಲಾ ಪ್ರಾಣಿಗಳೂ ಮತ್ತು ಎಲ್ಲಾ ವಸ್ತುಗಳೂ ಅಸ್ತಿತ್ವ ಎಂಬ ಏಕಮಾತ್ರ ಭಾವನೆ ಕೆಳಗೆ ಬರುವುವು. ನಾವೆಲ್ಲ ಅದರಲ್ಲಿ ಇರುವೆವು.
>
> ಸ್ವಾಮಿ ವಿವೇಕಾನಂದ

## ಅಜ್ಞಾತ ಜಗತ್ತು

ದೇವರ ಬಗ್ಗೆ ಹೇಗೆ ನಮಗೆ ಗೊತ್ತಿಲ್ಲವೋ ಹಾಗೆ ಸೃಷ್ಟಿಯ ಬಗ್ಗೆಯೂ–ಅದು ಅವಶ್ಯಕವೇ ಆನುಷಂಗಿಕವೇ ಎಂಬುದನ್ನು ನಿರ್ಧರಿಸಲು ಸಾಧ್ಯವಿಲ್ಲ. ನಾನೀಗ ಬರೆಯುತ್ತಿರುವುದನ್ನು ಬರೆಯದೇ ಇದ್ದರೂ ಇರಬಹುದಾಗಿತ್ತು, ಬರೆಯುತ್ತಿರುವುದು ಆನುಷಂಗಿಕ. ಈ ಆನುಷಂಗಿಕತೆ ಬರವಣಿಗೆಯ ಮೇಲೆ ಪರಿಣಾಮ ಬೀರದೆ? ಇದನ್ನು ನಮ್ಮೆಲ್ಲ ಆಯ್ಕೆಗಳ ಹಾಗೂ ಅವುಗಳ ಪರಿಣಾಮಗಳ ಬಗ್ಗೆಯೂ ಹೇಳಬಹುದು–ನಮ್ಮೆಲ್ಲ ಕರ್ಮ, ಅದರ ಫಲ ಎಲ್ಲವೂ ಆನುಷಂಗಿಕವೆ. ಆ ಕರ್ಮವನ್ನು ಮಾಡದೆಯೂ ಇರಬಹುದಾಗಿತ್ತು; ಆ ಆಯ್ಕೆಯನ್ನು ಆರಿಸಿಕೊಳ್ಳದೆಯೂ ಇರಬಹುದಾಗಿತ್ತು. ಇದೇ ರೀತಿಯಲ್ಲಿ ನಾನು ಇಂದು ಉಪನ್ಯಾಸಕನಾಗುವುದರ ಬದಲು ಸಂನ್ಯಾಸಿಯಾಗಬಹುದಾಗಿತ್ತು. ಬರೆಯುವುದರ ಬದಲು ಭಾಷಣ ಮಾಡಬಹುದಾಗಿತ್ತು. ಆನುಷಂಗಿಕವಾಗಿಯೇ ಆಗಲಿ, ಉಪನ್ಯಾಸಕನಾಗಿರುವುದು ವಾಸ್ತವ; ಸಂನ್ಯಾಸಿಯಾಗಿರಬಹುದಾಗಿತ್ತು ಎಂಬುದು ಸಾಧ್ಯತೆ.

ಈ ಸಾಧ್ಯತೆ ಆನುಷಂಗಿಕತೆ ಹಾಗೂ ಸ್ವಾತಂತ್ರ್ಯದ ಕಲ್ಪನೆಗಳನ್ನು ಸಮಷ್ಟಿಗೆ ಅನ್ವಯಿಸಬಹುದೆ? ಇಲ್ಲಿ ಮಾನವನ, ಪ್ರಪಂಚದ, ವಿಶ್ವದ ಅಸ್ತಿತ್ವ–ಯಾವುದೂ ಮಾನವನ ಆಯ್ಕೆಗೆ ಒಳಪಡುವುದು ಸಾಧ್ಯವಲ್ಲ. ಸಮಾನ ಸಾಧ್ಯತೆಗಳ ಪೈಕಿ ನಾವು ಆನುಷಂಗಿಕವಾಗಿ ಆರಿಸಿಕೊಂಡ ಅಸ್ತಿತ್ವ ನಮ್ಮದಲ್ಲ. ಅಸ್ತಿತ್ವಕ್ಕೆ ಬರುವ ಎಲ್ಲ ವಸ್ತುಗಳೂ–ನಕ್ಷತ್ರ ನೀಹಾರಿಕೆಗಳನ್ನೂ ಸೇರಿಸಿ— ನಾಶವಾಗತಕ್ಕವೇ ಎನ್ನುತ್ತದೆ ವಿಜ್ಞಾನ. ಎಂದಮೇಲೆ ಅವುಗಳ ಅಸ್ತಿತ್ವ ಆವಶ್ಯಕವೇನಲ್ಲ, ಕೇವಲ ಆನುಷಂಗಿಕ ತಾನೆ? ವಸ್ತುಗಳು (ಉದಾ : ಡೈನೊಸಾರಸ್‌ಗಳು) ಅಸ್ತಿತ್ವಕ್ಕೆ ಬರುವುದೂ ಕಣ್ಮರೆಯಾಗುವುದೂ ವಿಶ್ವ ವಿಕಾಸದ ಆವಶ್ಯಕ ಹಂತಗಳಾಗಿರಬಹುದು. ಪ್ರಪಂಚವೆಂದರೆ ಕೇವಲ ವಸ್ತುಗಳ ಒಟ್ಟು ಸಮುದಾಯವಲ್ಲದ್ದರಿಂದ ಮತ್ತು ಯಾರೂ ಪ್ರಪಂಚದ ಆದಿ ಅಂತ್ಯಗಳನ್ನು, ಬಿಗ್ ಬ್ಯಾಂಗ್, ಬ್ಲಾಕ್ ಹೋಲ್‌ಗಳನ್ನು ಕಂಡವರಿಲ್ಲವಾದ್ದರಿಂದ, ಈ ಬಗ್ಗೆ ಇದಮಿತ್ಥಂ ಎಂದು ಸಮಷ್ಟಿಮಟ್ಟದಲ್ಲಿ ಹೇಳುವುದು ಕಷ್ಟ. ಹೀಗಿರುವಾಗ ಇದರ ಮೂಲ ಕಾರಣವನ್ನು ತಿಳಿಯುವುದೆಂತು?

## ಮಾನವನ ವೈಶಿಷ್ಟ್ಯ

ದೇವರು ಇದ್ದಾನೆಯೆ ಎಂಬ ಪ್ರಶ್ನೆಗೆ ವಿಧಾಯಕ ಉತ್ತರ ಹುಡುಕುವ ಮೊದಲು ವಿಶ್ವದಲ್ಲಿ ಮಾನವನ ಸ್ಥಾನ ಎಂಥದೆಂಬುದನ್ನು ಸರಿಯಾಗಿ ಮನದಟ್ಟುಮಾಡಿಕೊಳ್ಳಬೇಕು. ಮಾನವನೊಬ್ಬ ಜೈವಿಕ ಪ್ರಾಣಿ; ಅವನ ಗಾತ್ರ-ಶಕ್ತಿ ಇತ್ಯಾದಿಗಳು ವಿಶ್ವದ **ಅಣೋರಣೀಯಾನ್** (ಒಂದು ಪ್ರೋಟಾನ್, $10^{-15}$ meters) ಹಾಗೂ **ಮಹತೋಮಹೀಯಾನ್** (ಮಾನವನಿಗೆ ತಿಳಿದಿರುವ ಬ್ರಹ್ಮಾಂಡದ ಗಾತ್ರ, $10^{+15}$ meters) ಮಿತಿಗಳ ನಟ್ಟನಡುವೆ ಇದೆ; ಸೂರ್ಯ ಸತ್ತಾಗ ವಿಜ್ಞಾನ, ವೇದಾಂತ, ಸಂಸ್ಕೃತಿ, ಕಲೆ, ಕಾವ್ಯ,ಯಶೋಗಾಥೆಗಳಾವುವೂ ಉಳಿಯವು; ಈ ಸಂಗತಿಗಳೆಲ್ಲ ನಮಗೆ ತಿಳಿದೇ ಇದೆ. ಈ ವೈಜ್ಞಾನಿಕ ಸತ್ಯದ ಹಿನ್ನೆಲೆಯಲ್ಲಿ

ಪಾಸ್ಕಲ್ ಹೇಳುವ ಈ ಮಾತು ನಮಗೆ ಧೈರ್ಯ ಕೊಡುತ್ತದೆ— 'ಪ್ರಕೃತಿಯಲ್ಲಿ ಮನುಷ್ಯ ಒಂದು ತೃಣ, ಒಂದು ಅತ್ಯಂತ ದುರ್ಬಲ ತೃಣ, ಆದರೆ ಯೋಚಿಸಬಲ್ಲ ತೃಣ. ಇಡೀ ವಿಶ್ವ ಅವನ ಮೇಲೆ ಯುದ್ಧಸಾರುವ ಅಗತ್ಯವಿಲ್ಲ; ಒಂದು ಸ್ವಲ್ಪ ವಿಷಾನಿಲ, ಒಂದು ಹನಿ ವಿಷದ ನೀರು ಅವನನ್ನು ಕೊಲ್ಲಬಲ್ಲುದು. ವಿಶ್ವ ಹಾಗೆ ಅವನನ್ನು ಕೊಂದರೂ ಸಾಯುತ್ತಿರುವೆನೆಂಬ ಪ್ರಜ್ಞೆಯುಳ್ಳ ಅವನೇ, ಏಕೆ ಕೊಲ್ಲುತ್ತಿರುವೆನೆಂದು ತಿಳಿಯದ ವಿಶ್ವಕ್ಕಿಂತ, ಮೇಲ್ಮಟ್ಟದವನಾಗುತ್ತಾನೆ. ಮಾನವನ ಉನ್ನತಿ ಅವನ ಚಿಂತನೆಯಲ್ಲಿ ಅಡಗಿದೆ.'(Pensees,Ed.Brunsthvieq,Page 167) ಚಿಂತನೆಯೆಂದರೆ ಎಂಥಾದ್ದು? ಹೊನ್ನು ಹೆಣ್ಣು ಮಣ್ಣುಗಳದ್ದಲ್ಲ, ರೋಗರುಜಿನಗಳದ್ದಲ್ಲ; ಸತ್ಯಕ್ಕೆ, ವಾಸ್ತವಕ್ಕೆ ತನ್ನನ್ನು ತಾನು ತೆರೆದಿಟ್ಟುಕೊಳ್ಳಬಲ್ಲ ಯೋಗ್ಯತೆ, ತನ್ನ ಬಾಳಿಗೆ ತಾನೇ ಶಿಲ್ಪಿಯಾಗುವ ಸ್ವಾತಂತ್ರ್ಯ, ತಾನೇ ತನ್ನ ಅನುಭವದ ಮೂಸೆಯಲ್ಲಿ ಪುಟವಿಕ್ಕಿಕೊಂಡಿರುವ ನೈತಿಕ ಮೌಲ್ಯಗಳನ್ನು ತನ್ನ ಬಾಳಿನ ಬೆಳಕಾಗಿಸಿಕೊಳ್ಳಬಲ್ಲ ಸಾಮರ್ಥ್ಯ. ಇದು ಮಾನವನ ವಿಶೇಷ ಮಾನತ್ವ. ಇದು ಪ್ರಾಪ್ತವಾಗಿರುವುದು ಪ್ರೋಟೋಪ್ಲಾಸಂನಿಂದ ಇಲ್ಲಿಯವರೆಗಿನ ಜೀವವಿಕಾಸದ ಅನುಭವದ ಫಲವಾಗಿ. ಈ ಬೆಳಕು ಕತ್ತಲೆಯಿಂದ ಬಂದದ್ದಲ್ಲ, ಈ ಸ್ವಾತಂತ್ರ್ಯ ಯುದ್ಧಮಾಡಿ ಪಡೆದದ್ದಲ್ಲ, ಈ ಸಾಮರ್ಥ್ಯ ಯಾರದ್ದೋ ಕೊಡುಗೆಯಲ್ಲ.

> ಪ್ರಜ್ಞೆಯ ಬೆಳಕು ಕತ್ತಲೆಯಿಂದ ಬಂದದ್ದಲ್ಲ, ಈ ಸ್ವಾತಂತ್ರ್ಯ ಯುದ್ಧಮಾಡಿ ಪಡೆದದ್ದಲ್ಲ, ಈ ಸಾಮರ್ಥ್ಯ ಯಾರದ್ದೋ ಕೊಡುಗೆಯಲ್ಲ.

### ದೇವರಿದ್ದಾನೆಯೆ?

ಜರ್ಮನ್ ತಾತ್ತ್ವಿಕ ಎಡ್ಮಂಡ್ ಹಸ್ರೆಲ್‌ನ ಶಿಷ್ಯ ಯೂಜೆನ್ ಫಿಂಕ್ ಪ್ರಶ್ನಿಸುತ್ತಾನೆ: 'ವಸ್ತುಗಳೇಕಿವೆ? ಬದಲಾಗಿ ಶೂನ್ಯವೇ ಇರಬಹುದಿತ್ತಲ್ಲ!' ನಮಗೆದುರಾಗುವ ಪ್ರಪಂಚದ ಆನುಷಂಗಿಕತೆಯನ್ನೂ, ವಸ್ತುಗಳ ಅಸಂಪೂರ್ಣತೆಯನ್ನೂ ಅನಿತ್ಯತೆಯನ್ನೂ ಅವನು ಹಾಸ್ಯಮಾಡುವ ರೀತಿ ಇದು. ದೇವರನ್ನು ಎಳೆದು ತರದಂತೆ ಉತ್ತರವನ್ನೂ ಕೊಡುತ್ತಾನೆ: 'ಏಕೆಂದರೆ ಪ್ರಪಂಚ ಬಿಚ್ಚಿಕೊಳ್ಳುತ್ತಿದೆ.'(Alles und Nithts,Hague: Nijhoff, 1959, Page 247) ಎಲ್ಲಾ ವಸ್ತುಗಳೂ ವಿಕಾಸದ ಹಾದಿಯಲ್ಲಿ ದೇಶಕಾಲಗಳ ಭೂಮಿಕೆಯ ಮೇಲೆ ಬರುತ್ತವೆ, ಹೋಗುತ್ತವೆ. ಪ್ರಪಂಚ ಈ ಎಲ್ಲವನ್ನೂ ಒಳಗೊಳ್ಳುವುದು ಮಾತ್ರವಲ್ಲ. ಎಲ್ಲದರಲ್ಲೂ ವ್ಯಾಪಿಸಿ ಕೂಡಾ ಇದೆ. ಇರುವ ಎಲ್ಲದರ ಆಗುಹೋಗುಗಳನ್ನು ನಿರ್ದೇಶಿಸುತ್ತಿದೆ. ಇರುವ ಎಲ್ಲದರ ಅಸ್ತಿತ್ವದ ಮೂಲವಾಗಿದೆ ಪ್ರಪಂಚ. ಏನು ಈ ಪ್ರಪಂಚ? ವಸ್ತುವಲ್ಲ ಅಸ್ತಿತ್ವವಲ್ಲ; ಕಾಲವಲ್ಲ ಅವಧಿಯಲ್ಲ ರೂಪವಲ್ಲ; ಆದರೆ ಈ ಎಲ್ಲಕ್ಕೂ ತಳಹದಿ, ಎಲ್ಲಕ್ಕೂ ಮೂಲ. ಇದರಿಂದ ಅವಿರ್ಭವಿಸುವ ವಸ್ತುಗಳ ಹುಟ್ಟುಸಾವುಗಳು ಯಾವ ನಿಯಮಕ್ಕೂ ಸಿಕ್ಕವು, ವಿಶ್ಲೇಷಣೆಗೂ ಒಳಪಡವು. ಆದರೆ ಬೇರೆಲ್ಲ ವಸ್ತುಗಳಂತೆ ನಾವೂ ಪ್ರವಾಹದಲ್ಲಿ ಕೊಚ್ಚಿ ಹೋಗುತ್ತಿದ್ದರೂ ಎಲ್ಲಕ್ಕೂ ಸಾಕ್ಷಿಯಾಗಿರಬಲ್ಲೆವು! ಫಿಂಕ್‌ನ ಅಭಿಪ್ರಾಯದಂತೆ ನಮ್ಮ ಪ್ರಪಂಚದ ದಿಢೀರ್‌ತನಕ್ಕೆ ದೇವರ ಆವಶ್ಯಕತೆ ಇಲ್ಲದಿರಬಹುದು. ಆದರೆ ಮಾನವನಿಗೆ ಮಾತ್ರ ಈ ಘಟನೆಗಳ ಸಾಕ್ಷಿಯ ಪಟ್ಟಸಿಕ್ಕಿಬಿಟ್ಟದ್ದು ಹೇಗೆ? ಇದಕ್ಕೆ ಫಿಂಕ್ ಬಳಿ ಉತ್ತರವಿಲ್ಲ.

ಇನ್ನೊಬ್ಬ ತಾತ್ತ್ವಿಕ–ಡನ್ಸ್ ಸ್ಕಾಟಸ್–ನನ್ನು ನೋಡೋಣ. ಇವನು ದೇವರು ವಿಶ್ವಕಾರಣ ಎಂಬ ಅರಿಸ್ಟಾಟಲನ ಅಭಿಪ್ರಾಯವನ್ನು ಒಪ್ಪುವುದಿಲ್ಲ. ದೇವರು ವಿಶ್ವಕಾರಣನಾಗಿದ್ದ ಪಕ್ಷದಲ್ಲಿ ನಮ್ಮ ಅನುಭವಕ್ಕೆ ಬರುವ ಪ್ರಪಂಚದ ವಸ್ತುಗಳ ಆನುಷಂಗಿಕತೆಯನ್ನೂ ಮಾನವನು ಕಾರಣನಾಗುವ ಘಟನೆಗಳ ಸಾಧ್ಯತೆಯನ್ನೂ ವಿವರಿಸುವುದು ಹೇಗೆ? – ಎಂದು ಅವನು ಪ್ರಶ್ನಿಸುತ್ತಾನೆ. ಇದಕ್ಕೆ ಉತ್ತರವಾಗಿ, ನಮ್ಮ ಸ್ವಾತಂತ್ರ್ಯವೂ ಆ ವಿಶ್ವಮೂಲದಿಂದಲೇ ಬಂದಿರುವುದೆಂದು ಹೇಳಬಹುದು. ಪ್ರಜ್ಞಾವಂತ ಮಾನವನಾಗಿಯೇ ಲಾಕ್ (Locke) 'ಪ್ರಜ್ಞೆ'ಯೂ ವಿಶ್ವದ ಮೂಲಕಾರಣದಿಂದಲೆ ಆವಿರ್ಭವಿಸಿದ್ದೆಂದು ಅಭಿಪ್ರಾಯ ಪಡುತ್ತಾನೆ. (Cf: '*Essay Concerning Human Understanding*, London, Everyman's Library,1967)

ಈ ವಿಶ್ವಕಾರಣವನ್ನೂ ವಿಶ್ವಮೂಲವನ್ನೂ ದೇವರೆಂದು ಕರೆದರೆ ತಪ್ಪೇನು? ಇದೇ ಸ್ವಾತಂತ್ರ್ಯವನ್ನೂ 'ಪ್ರಜ್ಞೆ'ಯನ್ನೂ ಪಡೆದಿರುವ ಮಾನವನನ್ನು ದೇವರೊಂದಿಗೆ ಸಮೀಕರಿಸಿದರೆ ತಪ್ಪೇನು? ○

---

> ಭಾರತದಲ್ಲಿಯಂತೆ ತಾತ್ತ್ವಿಕ ಚಿಂತನೆಯ ತುಡಿತವನ್ನು ನಾವು ಜಗತ್ತಿನಲ್ಲಿ ಮತ್ತೆಲ್ಲಿಯೂ ಕಾಣುವುದಿಲ್ಲ. ಹಿಂದೂಗಳ ಪಾಲಿಗೆ ತತ್ತ್ವಶಾಸ್ತ್ರ ಕೇವಲ ಒಂದು ಅಲಂಕಾರವಲ್ಲ ಅಥವಾ ಒಂದು ವಿಹಾರವೂ ಅಲ್ಲ. ಅದು ಜೀವನದ ಒಂದು ಪ್ರಧಾನ ಆಸಕ್ತಿ ಮತ್ತು ಸಾಧನೆಯಾಗಿದೆ. ಪಶ್ಚಿಮದಲ್ಲಿ ಸಿರಿವಂತರಿಗೆ ಅಥವಾ ಕಾರ್ಯಸಾಧಕರಿಗೆ ಸಿಗುವ ಅಪಾರ ಗೌರವ ಭಾರತದಲ್ಲಿ ಋಷಿಗಳಿಗೆ ಸಿಗುತ್ತದೆ. ಉತ್ಸವಗಳಲ್ಲಿ, ಕುಸ್ತಿ, ಮುಷ್ಟಿ ಯುದ್ಧಾದಿಗಳಂತೆ, ವಿವಿಧ ದಾರ್ಶನಿಕರ ನಡುವೆ ನಡೆಯುವ ವಾದಸ್ಪರ್ಧೆಯನ್ನು ಬೇರಾವ ದೇಶದಲ್ಲಿ ಕಾಣುತ್ತೀರಿ?....ರಕ್ತಪಾತದ ಯುದ್ಧದಲ್ಲಿ ಜಯಶಾಲಿಯಾಗಿ ಬಂದ ಸೇನಾನಾಯಕನಂತೆ ವಾದದಲ್ಲಿ ಗೆದ್ದವನು ಮಹಾವೀರನೆಂದು ಪರಿಗಣಿಸಲಾಗುತ್ತದೆ.
>
> —ವಿಲ್ ಡ್ಯುರಾಂಟ್, ***Our Oriental Heritage*** (ಪುಟ.೫೩೩)